ಸುಜಾತಾ ದಂಗಾದಳು. ಕೊನೆಯ ಪಕ್ಷ ಇದನ್ನಂತೂ ಅವಳು ಶಶಿಕಾಂತನಿಂದ ನಿರೀಕ್ಷಿಸಿರಲಿಲ್ಲ. ಅವಳ ಬಾಯಿಂದ ಒಂದಕ್ಷರ ಹೊರಡಲಿಲ್ಲ. ಅವಳ ಭಾವ ರಹಿತ ಕಣ್ಣುಗಳನ್ನು ನೋಡಿ ಅವನು ಉತ್ತೇಜಿತನಾಗಿ ಮುಂದುವರಿಸಿದ.

'ಸುಜಾತಾ, ನಾವಿಬ್ಬರೂ ಇದೇ ಆಶ್ರಮದಲ್ಲಿರೋಣ. ನಾವಿಬ್ಬರೂ ಜೀವನದ ಸಂಧ್ಯಾಕಾಲದಲ್ಲಿ ಕಾಲಿಟ್ಟಿದ್ದೇವೆ. ನೀನು ಈಗ ಸಂಸ್ಥೆಗಾಗಿ ಮಾಡುತ್ತಿರುವ ಸೇವೆಯನ್ನೇ ಮುಂದುವರೆಸು. ನಾನೂ ನಿನ್ನ ಜತೆಯಾಗುತ್ತೇನೆ. ನಮ್ಮ ಉಳಿದ ಬದುಕನ್ನು ಅರ್ಥಪೂರ್ಣವಾಗಿ ಕಳೆಯೋಣ. ಸುಜಾತಾ, ನಿನಗೆ ಭರವಸೆ ಕೊಡುತ್ತೇನೆ. ಇನ್ನು ಯಾರೂ ನಮ್ಮಿಬ್ಬರನ್ನು ಬೇರ್ಪಡಿಸಲಾರರು ದಯವಿಟ್ಟು ಇಲ್ಲ ಎನ್ನದೆ...'

ಆತ ಇನ್ನೂ ಮುಂದುವರಿಸುತ್ತಿದ್ದನೇನೋ, ಸುಜಾತಾಳೇ ನಡುವೆ ಬಾಯಿ ಹಾಕಿ ಚೀರಿದಳು.

'ಶಶೀ, ಸಾಕು ಇಲ್ಲಿಗೇ ನಿಲ್ಲಿಸು. ಸಾಂಸಾರಿಕ ಕಟ್ಟುಪಾಡಿನಿಂದ ನಾನು ಯಾವತ್ತೋ ಹೊರಗೆ ಬಂದಿದ್ದೇನೆ. ನಿನ್ನ ಉದಾತ್ತ ಧೋರಣೆ ನನ್ನದಲ್ಲ. ನನ್ನದು ಸಣ್ಣ ಬುದ್ಧಿ, ಸಣ್ಣ ಮನಸ್ಸು ಅಂತಲೇ ಇಟ್ಟುಕೋ. ಇಲ್ಲಿಗೆ ಬಂದ ಬಳಿಕ ಈ ಆಶ್ರಮಕ್ಕೆ ಸೇರಿದವರೆಲ್ಲ ನನ್ನ ಕುಟುಂಬದವರೇ ಎನ್ನುವ ಭಾವನೆ ಬೆಳೆದು ಬಿಟ್ಟಿದೆ. ನೀನು ಹೇಳಿದಂತೆ ಆಯುಷ್ಯದಲ್ಲಿ ಉಳಿದಿರುವ ಇನ್ನು ಶೇಷ ಭಾಗವನ್ನು ಅರ್ಥಪೂರ್ಣವಾಗಿ ಇವರೆಲ್ಲರ ಸೇವೆ ಮಾಡುತ್ತ ಇವರ ಜತೆಯೇ ಕಳೆದು ಬಿಡುತ್ತೇನೆ. ನನ್ನನ್ನು ಹೆತ್ತವರಿಗಿಂತ ಮಿಗಿಲಾಗಿ ಶ್ರೀನಿವಾಸರಾಯ ದಂಪತಿ ನೋಡಿಕೊಳ್ಳುತ್ತಿದ್ದಾರೆ. ಉಳಿದವರ ಪ್ರೀತಿಗೆ ಬೆಲೆ ಕಟ್ಟಲಾರೆ. ನಿನ್ನನ್ನು ಮತ್ತೆ ಬಾಳ ಸಂಗಾತಿಯಾಗಿ ವರಿಸಿ ನನ್ನ ಜೀವನದ ಅರ್ಥವನ್ನು ಸಂಕುಚಿತಗೊಳಿಸಲಾರೆ. ದೇವರು ನನಗೆ ಇಲ್ಲಿ ಎಲ್ಲವನ್ನೂ ಕೊಟ್ಟಿದ್ದಾನೆ. ಇನ್ನೂ ಹೆಚ್ಚಿನ ಸುಖ ಅರಸಿ ಹೋಗುವುದು ನನ್ನ ಗುಣವಲ್ಲ. ನನಗೆ ನಿನ್ನ ಬಗ್ಗೆ ಬರೀ ಕರುಣೆಯಲ್ಲದೆ ಬೇರೆ ಭಾವನೆಯೇ ಇಲ್ಲ.'

ಹಾಗೆನ್ನುತ್ತಲೇ ಅವಳು ಎದ್ದು ನಿಂತಳು. ಹಿಂದಿನ ಬಾರಿಯಂತೆ ಓಡಿ ಹೋಗಲಿಲ್ಲ.

ಸೂಚನೆಯನ್ನು ಅರಿತು ಅವನೂ ಎದ್ದು ನಿಂತ. ಕಾಲೆಳೆಯುತ್ತ ನಿಧಾನವಾಗಿ ಹೊರಟು ಹೋದ.

ಮರುದಿನ ಎದ್ದು ನಿತ್ಯದಂತೆ ಒಂದು ಕಪ್ ಚಾ ಮಾಡಿ ಹೊರಗೆ ವರಾಂಡಕ್ಕೆ ಬಂದರೆ ಅಲ್ಲಿ ಶ್ರೀನಿವಾಸ ರಾವ್ ನಿಂತಿದ್ದನ್ನು ನೋಡಿ ಸಂಭ್ರಮದಿಂದ ಅವರನ್ನು ಒಳಗೆ ಕರಕೊಂಡು ಹೋಗಿ ಕುಳ್ಳಿರಿಸಿದಳು. ತಮ್ಮ ಚಹದಲ್ಲಿ ಅರ್ಧದಷ್ಟನ್ನು ಇನ್ನೊಂದು ಕಪ್‌ಗೆ ಸುರಿದು ಅವರ ಕೈಗಿತ್ತಾಗ ಅವರು ನಿರಾಕರಿಸದೆ ತೆಗೆದು ಕೊಳ್ಳುತ್ತ ತಮ್ಮ ಅಂಗಿಯ ಜೇಬಿನಿಂದ ಒಂದು ಲಕೋಟೆಯನ್ನು ತೆಗೆದು ಅವಳ ಕೈಗಿತ್ತರು. ಮುಚ್ಚಿರದ ಆ ಲಕೋಟೆಯನ್ನು ತೆರೆದರೆ ಅದರೊಳಗೊಂದು ಚಿಕ್ಕ ಪತ್ರ. ಕೈಬರಹ ನೋಡಿಯೇ ಅದು ಶಶಿಕಾಂತನದೆಂದು ಅವಳಿಗೆ ತಿಳಿಯಿತು. ಪತ್ರ ಬಿಡಿಸಿ ಓದಿದಳು.

ಸುಜಾತಾ,

ಇವತ್ತು ಸಾಯಂಕಾಲ ನಿನ್ನೊಂದಿಗೆ ಮಾತುಕತೆ ಮುಗಿಸಿದ ಬಳಿಕ ಇನ್ನು ನಿನ್ನನ್ನು ಒತ್ತಾಯಿಸುವುದರಲ್ಲಿ ಅರ್ಥ ಕಂಡು ಬರಲಿಲ್ಲ. ಜೀವನದಲ್ಲಿ ತಿದ್ದಲಾರದ ತಪ್ಪು ಮಾಡಿದವ ನಾನು. ಈಗಂತೂ ಸಂಪೂರ್ಣವಾಗಿ ನಿನ್ನನ್ನು ಕಳಕೊಂಡೆ ಎಂದುಕೊಳ್ಳುತ್ತೇನೆ. ನನ್ನ ಲಕ್ಷ್ಮಿಯನ್ನು ಕಳಕೊಂಡ ಬಳಿಕ ಇದು ಎರಡನೆಯ ಆಘಾತ ನನಗೆ. ನನ್ನ, ನಿನ್ನ ಸಂಬಂಧ ದುರಸ್ತಿ ಮಾಡಲಾರದ ಹಂತಕ್ಕೆ ಮುಟ್ಟಿದೆ ಎನ್ನುವುದನ್ನು ನಂಬದೆ ವಿಧಿಯಿಲ್ಲ.